# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1496 |
| ಸದಸ್ಯರ ಹೆಸರು | : | ಡಾ: ಕೆ. ಗೋವಿಂದ ರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10-03-2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

****

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ನಗರಕ್ಕೆ ಕಾವೇರಿ ಕುಡಿಯುವ ನೀರು ಸರಬರಾಜು ಯೋಜನೆಯ 5ನೇ ಹಂತದ ಕಾಮಗಾರಿ ಪ್ರಾರಂಭ ಆಗಿದ್ದು ಯಾವಾಗ; (ಯೋಜನಾ ವೆಚ್ಚ, ವಾರ್ಷಿಕ ಅನುದಾನ -ವೆಚ್ಚ, ಕಾಮಗಾರಿ ಪ್ರಗತಿ ನಿರ್ವಹಣೆಯ ಸಹಭಾಗಿತ್ವ ಮತ್ತು ಶೇಕಡಾವಾರು ಪಾಲುದಾರಿಕೆಯ ಬಗ್ಗೆ ಪ್ರತ್ಯೇಕ ಮಾಹಿತಿ ಒದಗಿಸುವುದು) | ಕಾವೇರಿ ನೀರು ಸರಬರಾಜು ಯೋಜನೆಯ 5ನೇ ಹಂತದ ಯೋಜನೆಗೆ ಜೈಕಾ ಸಂಸ್ಥೆಯ ವತಿಯಿಂದ ಆರ್ಥಿಕ ನೆರವನ್ನು ಪಡೆಯಲಾಗುತ್ತಿದ್ದು, ಈ ಯೋಜನೆಯಿಂದ ಬೆಂಗಳೂರಿನ 110 ಹಳ್ಳಿಗಳಿಗೆ ನೀರು ಸರಬರಾಜು ಮಾಡಲಾಗುತ್ತದೆ. ಸರ್ಕಾರವು ಈ ಯೋಜನೆಗೆ ಅಂದಾಜು ವೆಚ್ಚವಾದ ರೂ.5550.00 ಕೋಟಿಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ನ.ಅ.ಇ/11/ ಎಮ್.ಎಸ್.ಐ/2015 ದಿನಾಂಕ:12.10.2017 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ದಿನಾಂಕ:24.01.2018 ರಂದು ಒಪ್ಪಂದ ಕರಾರಿನ ಅನ್ವಯ ಈ ಯೋಜನೆಗೆ ಆರ್ಥಿಕ ನೆರವನ್ನು ಜೈಕಾ ಸಂಸ್ಥೆಯ ವತಿಯಿಂದ ಪಡೆದಿದ್ದು, ಶೇಕಡಾವಾರು ಪಾಲುದಾರಿಕೆ ಈ ರೀತಿ ಇರುತ್ತದೆ. ಜೈಕಾ ಸಂಸ್ಥೆಯಿಂದ ಶೇಕಡ 84ರಷ್ಟು, ಕರ್ನಾಟಕ ಸರ್ಕಾರದ ಅನುದಾನ ಶೇಕಡ 8 ರಷ್ಟು ಮತ್ತು ಬೆಂಗಳೂರು ಜಲಮಂಡಳಿಯ ಪಾಲು ಶೇಕಡ 8ರಷ್ಟು ಇರುತ್ತದೆ.<br><br>ಇದರಿಂದ ಬೆಂಗಳೂರು ನಗರಕ್ಕೆ ದಿನಂಪ್ರತಿ 775 ದಶಲಕ್ಷ ಲೀಟರ್ ಹೆಚ್ಚುವರಿ ನೀರು ದೊರೆಯುವುದು. ಈ ಯೋಜನೆಯ ಭಾಗವಾಗಿ Project Management ಸೇವೆಯನ್ನು ನಿಯೋಜಿಸಲು M/s ONTB (JV of M/s Oriental Consultants Global Co. Ltd., M/s NJS Engineers India Pvt Ltd., M/s TATA Consulting Engineers Ltd., M/s Black and Veatech) ಸಂಸ್ಥೆಗೆ 2018-19 ನೇ ಸಾಲಿನಲ್ಲಿ ಗುತ್ತಿಗೆ ನೀಡಲಾಗಿದೆ ಮತ್ತು ಈ ಯೋಜನೆ ಅಡಿಯಲ್ಲಿ 09 Water Packages ಗಳಿಗೆ 2019-20, 2020-21 ರ ಸಾಲಿನಲ್ಲಿ ಹಂತ-ಹಂತವಾಗಿ ಕಾರ್ಯಾದೇಶಗಳನ್ನು ಒಟ್ಟಾರೆ ರೂ.3738.00 ಕೋಟಿಗಳಿಗೆ ನೀಡಲಾಗಿದ್ದು, ಸದರಿ ಕಾಮಗಾರಿಗಳು ಪ್ರಾರಂಭಗೊಂಡಿದ್ದು ಹಾಗೂ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ.<br><br>ವಾರ್ಷಿಕ ಅನುದಾನ - ವೆಚ್ಚದ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.<br><br>ಈ ಯೋಜನೆಯ ಅಡಿಯಲ್ಲಿ 03 Sewerage Package ಗಳಿಗೆ 2020-21 ರ ಸಾಲಿನಲ್ಲಿ ಹಂತ-ಹಂತವಾಗಿ ಕಾರ್ಯಾದೇಶವನ್ನು ರೂ.1014.00ಕೋಟಿಗಳಿಗೆ ನೀಡಲಾಗಿರುತ್ತದೆ. |

...2)

| | | |
|---|---|---|
| ಆ | 5ನೇ ಹಂತದ ಯೋಜನೆಯಿಂದ ನಗರದ ಯಾವ ಯಾವ ಭಾಗಗಳಿಗೆ ಕಾವೇರಿ ನೀರು ಪೂರೈಕೆಗೆ ಯೋಜಿಸಲಾಗಿದೆ; ಈ ಭಾಗಗಳಲ್ಲಿ ಪ್ರಸ್ತುತ ಕಾಮಗಾರಿಯ ಪ್ರಗತಿ ಏನು; (ಸಂಪೂರ್ಣ ಮಾಹಿತಿ ಒದಗಿಸುವುದು) | ಈ ಯೋಜನೆಯಿಂದ ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ನೀರು ಸರಬರಾಜು ಮಾಡಲಾಗುತ್ತದೆ. |
| ಇ | ಈ ಯೋಜನೆ ಪೂರ್ಣಗೊಳ್ಳುವುದು ಯಾವಾಗ; | ಈ ಯೋಜನೆಯು ಜೈಕಾದೊಂದಿಗೆ ಆಗಿರುವ MoD ಪ್ರಕಾರ ಆಗಸ್ಟ್-2023ರಲ್ಲಿ ಕುಡಿಯುವ ನೀರಿನ ಪ್ಯಾಕೇಜ್‌ಗಳು ಪೂರ್ಣಗೊಳ್ಳಬೇಕಾಗಿರುತ್ತದೆ.<br><br>ಕಾಮಗಾರಿಗಳ ಪ್ರಗತಿಯ ಅನ್ವಯ ಸದರಿ ಯೋಜನೆಯು ಮಾರ್ಚ್ 2023ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. |
| ಈ | ಯೋಜನೆಯು ವಿಳಂಬ ಗತಿಯಲ್ಲಿ ಸಾಗುತ್ತಿರುವುದರಿಂದ, ರಸ್ತೆಗಳಲ್ಲಿ ಗುಂಡಿ, ಅಪೂರ್ಣ ಕಾಮಗಾರಿಯಿಂದಾಗಿ ಸಾರ್ವಜನಿಕರು, ವಾಹನಗಳ ಸವಾರರು ಅನುಭವಿಸುತ್ತಿರುವ ತೊಂದರೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? | ಕಾವೇರಿ 5ನೇ ಹಂತದ ಯೋಜನೆಗೆ ಕೋವಿಡ್-19 (1ನೇ ಮತ್ತು 2ನೇ ಅಲೆ) ನಿಂದಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿ ಮಾಡಿರುವಂತಹ ಆದೇಶಗಳ ಹಿನ್ನೆಲೆಯಲ್ಲಿ 1ನೇ ಅಲೆಯಲ್ಲಿ 6 ತಿಂಗಳು, 2ನೇ ಅಲೆಯಲ್ಲಿ 2 ತಿಂಗಳು ಮತ್ತು ಆಕ್ಸಿಜನ್ ಸಿಲಿಂಡರ್‌ಗಳ ಕೊರತೆಯ ಹಿನ್ನೆಲೆಯಲ್ಲಿ ಹಾಗೂ 3ನೇ ಅಲೆಯಲ್ಲಿ ವಾರಾಂತ್ಯ ಮತ್ತು ನೈಟ್ ಕರ್ಫ್ಯೂ ಜಾರಿ ಮಾಡಿರುವ ಹಿನ್ನೆಲೆಯಲ್ಲಿ ಕಾಮಗಾರಿಗಳ ಪ್ರಗತಿಯು ಕುಂಠಿತಗೊಂಡಿದ್ದರೂ, ಮಾರ್ಚ್- 2023ರ ವೇಳೆಗೆ ಸದರಿ Water Packages ಯೋಜನೆಯನ್ನು ಮುಕ್ತಾಯಗೊಳಿಸುವ ನಿರೀಕ್ಷೆಯಿರುತ್ತದೆ.<br><br>ಈ ಯೋಜನೆಯ ಸಿ.ಪಿ-09 ಮತ್ತು ಸಿ.ಪಿ-10 ಪ್ಯಾಕೇಜ್ ಅಡಿಯಲ್ಲಿ ನೀರು ಸರಬರಾಜಿನ ಮುಖ್ಯ ಕೊಳವೆ ಮಾರ್ಗವನ್ನು ಬೆಂಗಳೂರು ನಗರದಲ್ಲಿ ಅಳವಡಿಸುತ್ತಿದ್ದು, ಕೊಳವೆ ಮಾರ್ಗ ಅಳವಡಿಸಿದ ನಂತರ ರಸ್ತೆಯನ್ನು ಗುತ್ತಿಗೆ ನಿಯಮಾನುಸಾರ ಮೊದಲಿನ ಸ್ಥಿತಿಗೆ ಪುನರ್ ನಿರ್ಮಾಣ ಮಾಡಲಾಗುತ್ತಿದೆ.<br><br>ಸದರಿ ಕಾಮಗಾರಿಯ ಒಪ್ಪಂದದ ಗುತ್ತಿಗೆ ಕರಾರಿನ ಪ್ರಕಾರ ಪ್ರಸ್ತುತ ದಿನಾಂಕದವರೆಗೆ ಯಾವುದೇ ವಿಳಂಬವಾಗಿರುವುದಿಲ್ಲ ಹಾಗೂ ಕಾಮಗಾರಿಗಳು ಒಪ್ಪಂದದ ಗುತ್ತಿಗೆ ಕರಾರಿನ ಪ್ರಕಾರ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ನಿರೀಕ್ಷೆಯಲ್ಲಿರುತ್ತದೆ. |

ಸಂಖ್ಯೆ: ನಅಇ 29 ಎಂಎಸ್‌ಐ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ-1

## ವಾರ್ಷಿಕ ಅನುದಾನ - ವೆಚ್ಚದ ವಿವರಗಳು

| ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | | | | | | | | | | | | ರೂ.ಕೋಟಿಗಳಲ್ಲಿ | | | |
|---|---|---|---|---|---|---|---|---|---|---|---|---|---|---|---|
| ಯೋಜನೆ | ಯೋಜನಾ ವೆಚ್ಚ | ಜೈಕ್ ಮತ್ತು ಸರ್ಕಾರದ ಪಾಲಿನ ಮೊತ್ತ (ಶೇ.84 + 8) | ಲೆಕ್ಕಶೀರ್ಷಿಕೆ | 2018-19 | | 2019-20 | | 2020-21 | | 2021-22 | | ಒಟ್ಟು | |
| | | | | ಹಂಚಿಕೆ ಅನುದಾನ | ಬಿಡುಗಡೆ ಮಾಡಿದ ಅನುದಾನ | ಹಂಚಿಕೆ ಅನುದಾನ | ಬಿಡುಗಡೆ ಮಾಡಿದ ಅನುದಾನ | ಹಂಚಿಕೆ ಅನುದಾನ | ಬಿಡುಗಡೆ ಮಾಡಿದ ಅನುದಾನ | ಹಂಚಿಕೆ ಅನುದಾನ | ಬಿಡುಗಡೆ ಮಾಡಿದ ಅನುದಾನ (ದಿ. 07-03-2022ರ ಅಂತ್ಯಕ್ಕೆ) | ಹಂಚಿಕೆ ಅನುದಾನ | ಬಿಡುಗಡೆ ಮಾಡಿದ ಅನುದಾನ |
| ಕಾವೇರಿ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ- 5ನೇ ಹಂತ | 5550.00 | 5106.00 | 6215-01-190-2-86 | 20.00 | 20.00 | 139.25 | 139.25 | 288.87 | 288.87 | 900.00 | 837.49 | 1,348.12 | 1,285.61 |

ಮುಖ್ಯ ಅಭಿಯಂತರರು (ಕಾ)
ಬೆಂಗಳೂರು ಜಲಮಂಡಳಿ